# ಇದು STAND UP COMEDY ಟೈಂ

**ಬೆಂ**ಗಳೂರಿನ ಅಕ್ಷಯ್ ಲಕ್ಷ್ಮಣ್ ಎಂಬ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಪ್ರದರ್ಶನ ನೀಡುತ್ತಿರುವಾಗಲೇ ತನ್ನತ್ತ ತೂರಿ ಬಂದ ಬಿಯರ್ ಬಾಟಲಿನಿಂದ ತಪ್ಪಿಸಿಕೊಳ್ಳಲು ವಿಫಲ ಯತ್ನ ನಡೆಸಿ ವರ್ಷವೂ ಕಳೆದಿಲ್ಲ.

ದೇಶದ ಅನೇಕ ಸ್ಟ್ಯಾಂಡ್–ಅಪ್ ಕಾಮಿಡಿಯನ್‌ಗಳ ನಡುವೆ ಈ ಸುದ್ದಿಯ ಕುರಿತು ಆರೋಗ್ಯಕರ ಚರ್ಚೆಯೊಂದು ಆಗ ನಡೆದಿತ್ತು. ಟೀವಿ ವಾಹಿನಿಗಳು, ಸಿನಿಮಾ, ಎಫ್‌ಎಂ ರೇಡಿಯೊ ಮಾಧ್ಯಮಗಳ ಜನಪ್ರಿಯತೆಯ ಹಲಗೆಯ ಮೇಲಿಂದಲೇ ಚಿಮ್ಮಿದ್ದು ಸ್ಟ್ಯಾಂಡ್–ಅಪ್ ಕಾಮಿಡಿ. ಅದಕ್ಕೆ ಶತಮಾನಗಳಷ್ಟು ಇತಿಹಾಸವೇನೋ ಇದೆ. ಭಾರತದಲ್ಲಿ 17ನೇ ಶತಮಾನದಲ್ಲೇ ತಿರುವನಂತಪುರದಲ್ಲಿ ಚಕ್ಯಾರ್ ಕೂತು ಎಂಬ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಇದ್ದ ಎನ್ನುತ್ತಾರೆ. ಆದರೆ, ಅದು ನಮ್ಮ ದೇಶದಲ್ಲಿ ವ್ಯವಸ್ಥಿತ ಫಾರ್ಮ್ ಕಂಡುಕೊಂಡದ್ದು 2005ರ ನಂತರ.

1986ರಲ್ಲಿ ಹಿಂದಿ ಚಿತ್ರನಟ ಜಾನಿ ಲಿವರ್ 'ಹೋಪ್ 86' ಎಂಬ ಚಾರಿಟಿ ಶೋನಲ್ಲಿ ಸ್ಟ್ಯಾಂಡ್–ಅಪ್ ಕಾಮಿಡಿ ಪ್ರದರ್ಶಿಸಿದ್ದರು. ಬಾಲಿವುಡ್‌ನ ನಟ–ನಟಿಯರು, ತಂತ್ರಜ್ಞರು ಅದನ್ನು ಕಂಡು ಅವಾಕ್ಕಾಗಿದ್ದರು. ಜಾನಿ ಲಿವರ್ ಟೈಮಿಂಗ್, ಆಂಗಿಕ ಭಾಷೆ, ಮುಖಾಭಿನಯ ಕಂಡು ಚಪ್ಪಾಳೆಯ ಮಳೆಗರೆದಿದ್ದರು. ಈಗ ಇದೇ ಜಾನಿ ಕನ್ನಡ ಚಿತ್ರರಂಗ ಪ್ರವೇಶಿಸಿ, ಮುದ್ದು ಮುದ್ದಾಗಿ ನಮ್ಮ ಭಾಷೆಯನ್ನೂ ಮಾತನಾಡುತ್ತಿರುವುದನ್ನು ನೋಡಿದರೆ ಅವರೊಳಗಿನ ಹಾಸ್ಯಪ್ರಜ್ಞೆ ಹಾಗೂ ಮುಗ್ಧತೆ ಎರಡೂ ಮೆಚ್ಚಾಗುತ್ತದೆ.

'ದಿ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜ್' ಟೀವಿ ಕಾರ್ಯಕ್ರಮ 2005ರಲ್ಲಿ ಪ್ರಸಾರವಾದದ್ದೇ ರಾಜು ಶ್ರೀವಾಸ್ತವ್, ಕಪಿಲ್ ಶರ್ಮ, ಸುನೀಲ್ ಪಾಲ್ ತರಹದ ಹೊಸ ಪ್ರತಿಭೆಗಳಿಗೆ ಜನಮನ್ನಣೆ ಸಿಗತೊಡಗಿತು. ಅವರೆಲ್ಲ ಹಿಂದಿಯಲ್ಲೇ ಹಾಸ್ಯ ಚಟಾಕಿಗಳನ್ನು ಹಾರಿಸಿ ರಂಜಿಸಿದವರು.

ತಾತ್ವಿಕವಾಗಿ 'ಸ್ಟ್ಯಾಂಡ್–ಅಪ್ ಕಾಮಿಡಿ'ಯ ಬೇರು ನಮ್ಮ ಜನಪದದಲ್ಲೇ ಇದೆ. ಹರಿಕಥೆಗಳ ಅದೆಷ್ಟು ಪ್ರಸಂಗಗಳಲ್ಲಿ ಪ್ರೇಕ್ಷಕರು ಬಿದ್ದು ಬಿದ್ದೂ ನಕ್ಕಿಲ್ಲ. ಪುರಾಣದ ನಾರದ ಮಹರ್ಷಿ ಮೋಡಗಳ ಮೇಲೆ ತೇಲುವ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಅಲ್ಲವೇ? ಈಗಿನ ಯಕ್ಷಗಾನ 'ರಾಜಕೀಯ ಸಿದ್ಧಾಂತ ವಾಹಕ'ವಾಗಿ ಬದಲಾದ ಮೇಲೆ ಇಡುತ್ತಿರುವ ಕಚಗುಳಿಯನ್ನು ನೋಡಿ. ಅವಧೂತರು ಮಾಡಿಸುವ ದರ್ಶನಗಳಲ್ಲೂ 'ಸ್ಟ್ಯಾಂಡ್–ಅಪ್ ಕಾಮಿಡಿ'ಯ ಲವಲೇಶ ಇರುತ್ತಿತ್ತಲ್ಲ. ಮಾಸ್ಟರ್ ಹಿರಣ್ಣಯ್ಯ 'ಲಂಚಾವತಾರ', 'ಫೋನಾವತಾರ'ದ ಕ್ಯಾಸೆಟ್‌ಗಳನ್ನು ಕೊಟ್ಟು, ಅದರಲ್ಲೂ ಇಂಥದ್ದೇ ಹಾಸ್ಯವನ್ನಲ್ಲವೇ ತುಂಬಿದ್ದು. ಈಗ ಅದಕ್ಕೊಂದು ಇಂಗ್ಲಿಷ್ ಶಿಷ್ಟಾಚಾರದ ಪದವಾಗಿ 'ಸ್ಟ್ಯಾಂಡ್–ಅಪ್ ಕಾಮಿಡಿ' ರೂಪತಳೆದಿದೆ.

ಪ್ರದರ್ಶಕ ಪ್ರೇಕ್ಷಕರ ಎದುರು ನಿಲ್ಲಬೇಕು. ಎದುರಲ್ಲಿ ಮೈಕ್ ಇರುತ್ತದೆ



ದಾನಿಶ್ ಶೇಠ್

ಜಾನಿ ಲಿವರ್

ಕಪಿಲ್ ಶರ್ಮ